ಸಿಂಗಾನೆಲ್ಲೂರು ಪುಟ್ಟಸ್ವಾಮಯ್ಯ, ಮಿರ್ಲೆ ಶ್ರೀನಿವಾಸರಾಯರು, ಬಿ. ಜಯಮ್ಮ, ಸ್ವತಃ ಗುಬ್ಬಿವೀರಣ್ಣನವರು ಅಭಿನಯಿಸುತ್ತಿದ್ದ ಗುಬ್ಬಿ ಕಂಪನಿಯ ನಾಟಕಗಳಲ್ಲಿ ವಿವಿಧ ಪಾತ್ರಗಳಲ್ಲಿ ಕಾಣಿಸಿಕೊಂಡ ನಾಗಪ್ಪ ದಿನ ಕಳೆದಂತೆ 'ಬೇಡರ ಕಣ್ಣಪ್ಪ'ನೆಂದೇ ಕರೆಯಲ್ಪಟ್ಟರು.

ವೃತ್ತಿ ನಾಟಕ ಕಂಪನಿಗಳಲ್ಲಿ ಖ್ಯಾತಿ ಗಳಿಸಿದ ಬಹುತೇಕ ಕಲಾವಿದರಂತೆ ನಾಗಪ್ಪನವರಿಗೂ ಸ್ವಂತ ಕಂಪನಿ ಸ್ಥಾಪಿಸುವ ಮನಸ್ಸಾಯಿತು. ಸ್ವತಂತ್ರ ಮನೋಭಾವದ ಕಲಾವಿದರೂ ಇದನ್ನು ಬೆಂಬಲಿಸಿದಾಗ ನಾಟಕ ಮಂಡಲಿ ಸ್ಥಾಪನೆಗೆ ಹೆಜ್ಜೆ ಇಡಲು ತಡವಾಗಲಿಲ್ಲ. 1942 ರಲ್ಲಿ ನಂಜನಗೂಡಿನ ಶ್ರೀಕಂಠೇಶ್ವರನ ಹೆಸರಿನಲ್ಲಿ 'ಶ್ರೀ ಶ್ರೀಕಂಠೇಶ್ವರ ಸ್ವಾಮಿ ನಾಟಕ ಮಂಡಲಿ'ಯನ್ನು ಪ್ರಾರಂಭಿಸಿದರು.

ನಾಟಕ ಕಂಪನಿಯನ್ನು ಸುವ್ಯವಸ್ಥಿತವಾಗಿ ನಡೆಸುವುದು ಎಲ್ಲರಿಗೂ ಸಾಧ್ಯವಾಗದ ಕಲೆ. ಇದಕ್ಕೆ ನಾಗಪ್ಪ ಕೂಡ ಹೊರತಾಗಿರಲಿಲ್ಲ. 'ಶ್ರೀ ಕೃಷ್ಣ ಲೀಲೆ' ನಾಟಕ ಪ್ರದರ್ಶನದಿಂದ ಕಂಪನಿ ಶುರುಮಾಡಿ ಪ್ರೇಕ್ಷಕರ ಗಮನವೇನೋ ಸೆಳೆದರು. ಆದರೆ ವರುಣದೇವನ ಆರ್ಭಟ, ತುಂಬಿದ ಕಪಿಲಾ ನದಿಗೆ ನಾಗಪ್ಪನವರ ರಂಗಮಂದಿರ ಕೊಚ್ಚಿಹೋಯಿತು.

ಆರಂಭದಲ್ಲೇ ಆಘಾತ ಅನುಭವಿಸಿದ ನಾಗಪ್ಪ ಜೀವನಕ್ಕಾಗಿ ಮೊರೆ ಹೋಗಿದ್ದು ಅಭಿನಯಕ್ಕೆ. ಅದೂ ತಾವು ತೊರೆದು ಬಂದಿದ್ದು ಗುಬ್ಬಿ ಕಂಪನಿ ಮಡಿಲಿಗೆ. ವೀರಣ್ಣನವರ ಆಶ್ರಯದಲ್ಲಿ ಬದುಕು ದೂಡುತ್ತಿದ್ದರೂ ಕಳೆದುಹೋದ ಕನಸು ಇವರನ್ನು ಆಗಾಗ ನೆನಪಿಸುತ್ತಲೇ ಇತ್ತು.

ರಾಜ್ಯದುದ್ದಕ್ಕೂ ಮೊಕ್ಕಾಂ ಬದಲಿಸುತ್ತಿದ್ದ ಕಂಪನಿಯಲ್ಲಿ ಜೀವನ ನಿರ್ವಹಣೆ ಮಾಡುತ್ತಿದ್ದ ನಾಗಪ್ಪ ತಮ್ಮ ಹುಟ್ಟೂರಿನಲ್ಲಿ ಮತ್ತೆ ರಂಗಮಂದಿರ ಕಟ್ಟುವ ಪ್ರಯತ್ನಕ್ಕೆ ಕೈ ಹಾಕಿದರು. ಹಿಂದೆ ಮಳೆರಾಯ ನಾಟಕ ಮಂದಿರವನ್ನು ಆಹುತಿ ತೆಗೆದುಕೊಂಡಿದ್ದರೆ ಈ ಬಾರಿ ಪವನ ದೇವ ಆ ಕೆಲಸ ಮಾಡಿದ್ದ. ನಾಗಪ್ಪನವರ ಇನ್ನೊಂದು ಕನಸು ಭಗ್ನವಾಯಿತು.

ಅಭಿನಯದ ಅನುಭವ ಅವರನ್ನು ಕೈಬಿಡಲಿಲ್ಲ. ಸ್ವಂತ ಕಂಪನಿಯಲ್ಲಿ ತಮ್ಮೊಂದಿಗೆ ಇದ್ದ ಕಲಾವಿದರೊಂದಿಗೆ ಬೇರೆಯವರ ರಂಗಮಂದಿರಗಳಲ್ಲಿ ನಾಟಕ ಪ್ರಯೋಗಗಳನ್ನು ಮುಂದುವರೆಸಿದರು. ಬೇರೆಯವರ ನಾಟಕ ಕಂಪನಿಗಳಲ್ಲೂ ಪಾತ್ರ ನಿರ್ವಹಿಸಲು ಒಪ್ಪಿದರು.

'ಶಿವಪ್ಪ ಕಾಯೋ ತಂದೆ ಮೂರು ಲೋಕ ಸ್ವಾಮಿ ದೇವ' ಎಂಬ ಬೇಡರ ಕಣ್ಣಪ್ಪ ನಾಟಕದ ಹಾಡು ಆಗಾಗ ರಂಗಮಂದಿರಗಳಲ್ಲಿ ಪ್ರತಿಧ್ವನಿಸುತ್ತಲೇ ಇತ್ತು. ನಾಗಪ್ಪನವರ ಜೀವನ ಬಂಡಿಯ ಚಕ್ರಗಳು ತಿರುಗುತ್ತಲೇ ಇದ್ದವು.

ಬೇಡರ ಕಣ್ಣಪ್ಪನ ಪಾತ್ರ ಅವರಿಗೆ ಖ್ಯಾತಿ ತಂದುಕೊಟ್ಟಿದ್ದರೂ ಇನ್ನೂ ಕೆಲವು ಪಾತ್ರಗಳಿಂದ ಪ್ರೇಕ್ಷಕರ ಗಮನ ಸೆಳೆಯುವಲ್ಲಿ ಯಶ ಕಂಡಿದ್ದರು. ಅವು ಯಾವುವೆಂದರೆ, 'ಕಾಳಿದಾಸ' ನಾಟಕದ ಭೋಜರಾಜ, 'ರಾಮಾಯಣ'ದ ಭರತ, 'ದಾನವೀರ ಕರ್ಣ'ದ ದುರ್ಯೋಧನನ ಪಾತ್ರಗಳು.

ಎಂಟರ ವಯಸ್ಸಿನಲ್ಲಿ ಕಲಾರಂಗಕ್ಕೆ ಕಾಲಿಟ್ಟು ಸಂಗೀತ, ನಾಟಕಗಳಲ್ಲಿ ಸೈ ಎನ್ನಿಸಿಕೊಂಡ ನಂಜನಗೂಡು ನಾಗಪ್ಪ ಗಾಯನ, ಅಭಿನಯಗಳಲ್ಲಿ ತಮ್ಮದೇ ಸ್ಥಾನ ಗಳಿಸಿಕೊಂಡರು.

ಅಭಿನಯದಿಂದ ಪ್ರೇಕ್ಷಕರನ್ನು ತಣಿಸುತ್ತಿದ್ದ ನಾಗಪ್ಪ ತಮ್ಮೂರಿನ ಪುರಸಭೆ ಸದಸ್ಯರಾಗಿಯೂ ನಾಗರಿಕರ ಒಲವನ್ನು ಗಳಿಸಿಕೊಂಡರು. ಕನ್ನಡ ವೃತ್ತಿ ನಾಟಕ ರಂಗದ ವಿಚಾರ ಬಂದರೆ 'ಬೇಡರ ಕಣ್ಣಪ್ಪ' ಪಾತ್ರದಿಂದ ಗುರುತಿಸಿಕೊಂಡವರಲ್ಲಿ ಮುಖ್ಯರಾದವರು ಈ ಅಪರೂಪದ ಕಲಾವಿದ ನಂಜನಗೂಡು ನಾಗಪ್ಪ.